**<u>ದಿನಾಂಕಃ 06-01-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಎಸ್.ಕೆ. ವಕೀಲರಿಂದಃ</u>**

ಈ ಅರ್ಜಿಯ ಅರ್ಜಿದಾರರಾದ ನಾನು , ನನ್ನ ಗಂಡ ಮತ್ತು ಮೃತ ನಮ್ಮ ಮಗ ರಾಜು ನಾವೆಲ್ಲರೂ ದಾವಣಗೆರೆ ತಾಲ್ಲೂಕಿನ ಸಿದ್ದನೂರು ಗ್ರಾಮದ ನಿವಾಸಿಗಳು ಆಗಿದ್ದೇವೆ ಎಂದರೆ ಸರಿ. ಸದರಿ ಅಪಘಾತವು ದಾವಣಗೆರೆ ಜಿಲ್ಲೆ ಮತ್ತು ತಾಲ್ಲೂಕಿನ ಆನಗೋಡ ಗ್ರಾಮದ

ಬಳಿ ಆಗಿರುತ್ತದೆ ಎಂದರೆ ಸರಿ. ಈ ಅರ್ಜಿಯ ಅರ್ಜಿದಾರರಾದ ನಾನು , ನನ್ನ ಗಂಡ ಮತ್ತು ಮೃತ ನಮ್ಮ ಮಗ ರಾಜು ನಾವೆಲ್ಲರೂ ಎಂದಿಗೂ ರಾಣೇಬೆನ್ನೂರಿನಲ್ಲಿ ವಾಸವಾಗಿ ಇರಲಿಲ್ಲ ಎಂದರೆ ಸರಿ.

ಸದರಿ ಅಪಘಾತದ ಸಮಯದಲ್ಲಿ ಮೃತ ನಮ್ಮ ಮಗ ರಾಜು ಮೋಟಾರ್ ಸೈಕಲ್ ನ ಹಿಂಬದಿ ಸವಾರನೆಂದು ಪ್ರಯಾಣಿಸುತ್ತಿದ್ದ ಎಂದರೆ ಸರಿ. ಸದರಿ ಅಪಘಾತದ ಸಮಯದಲ್ಲಿ ಸದರಿ ಮೋಟಾರ್ ಸೈಕಲ್ ನ ಸವಾರ ಮತ್ತು ಹಿಂಬದಿ ಸವಾರನಾಗಿದ್ದ ಮೃತ ನನ್ನ ಮಗ ರಾಜು ಹೆಲ್ಮೇಟ್ ನ್ನು ಧರಿಸಿರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ . ಸದರಿ ಅಪಘಾತದಲ್ಲಿ ಸದರಿ ಮೋಟಾರ್ ಸೈಕಲ್ ಚಾಲಕನಾದ ಪರಶುರಾಮ ರವರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ ಮತ್ತು ಸದರಿ ಅಪಘಾತದ ನಂತರ ಆತನ ಅಪಘಾತ ಸ್ಥಳದಿಂದ ಓಡಿ ಹೋಗಿದ್ದ ಎನ್ನುವ ವಿಷಯ ನನಗೆ ಗೊತ್ತಿಲ್ಲ . ಸದರಿ ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತದ ಸಮಯದಲ್ಲಿ ಸದರಿ ಮೋಟಾರ್ ಸೈಕಲ್ ನ ಸವಾರನಾದ ಪರಶುರಾಮ ರವರು ಇಬ್ಬರು ಹಿಂಬದಿ ಸವಾರರನ್ನು ಕುಳಿತಿಸಿಕೊಂಡು ಚಾಲನೆ ಮಾಡುತ್ತಿದ್ದ

ಎಂದರೆ ಸರಿಯಲ್ಲ.

ಮೇಲೆ ಹೇಳಿದ ಎಲ್ಲಾ ಕಾರಣಗಳಿಗಾಗಿ 2 ನೇ ಎದುರುದಾರ ನಮಗೆ ಯಾವುದೇ ಪರಿಹಾರ ಮೊತ್ತ ನೀಡಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವಾದ ಸ್ಥಳ ದಾವಣಗೆರೆ ಜಿಲ್ಲೆಯ ವ್ಯಾಪ್ತಿಗೆ ಬರುವುದರಿಂದ ಮತ್ತು ಈ ಅರ್ಜಿಯ ಅರ್ಜಿದಾರರಾದ ನಾವೆಲ್ಲರೂ ಸಹ ದಾವಣಗೆರೆ ಜಿಲ್ಲೆಯ ನಿವಾಸಿಗಳು ಆಗಿರುವ ಕಾರಣಕ್ಕಾಗಿ ಈ ಅರ್ಜಿ ಕಾನೂನಿನ ಅಡಿಯಲ್ಲಿ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಹಿ/–

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.